ಇವರ ಶರೀರದೊಳಗೆ ಗೆದ್ದಲು ಸೇರಿಕೊಂಡು ಒಂದು ಕಡೆಯಿಂದ ತಿಂದ್ಕೊಂಡ್ ಬರ್ತಿದೆ ಅನ್ನಿಸ್ತಿದೆ ನಂಗೆ. ಯಂಗಾದ್ರಾಗ್ಲಿ, ಆದಷ್ಟು ಬೇಗ ಬೆಂಗಳೂರಿನ ವಿಕ್ಟೋರಿಯಾದಲ್ಲಿ ತೋರಿಸಿದ್ರೆ ಒಳ್ಳೇದು. ಮಧುಗಿರಿ, ಕೊರಟಗೆರೆ, ಗೌರಿಬಿದನೂರು ಈ ಯಾವ್ ಆಸ್ಪತ್ರೆಗಳಿಗೂ ಜುಂ ಅಂಬೊ ಕಾಯ್ಲೆ ಅಲ್ಲ ಇದು. ನಾಡಿ ಬಡಿತಾನೇ ಹೇಳ್ತ ಐತೆ. ಯಂಗೂ ನಿಮ್ಗೆ ಬಿಪಿಎಲ್ ಕಾರ್ಡ್ ಇರ್ತದಲ್ವ ಫ್ರೀ ಆಗ್ತೈತೆ. ತೀರಾ ಕೆಮ್ಮು ಬಂದ್ರೆ ರಾತ್ರಿ ಮಲ್ಗೊವಾಗ ಒಂದ್ಸೊಳ್ಳೆ ಬಿಸ್ಕತ್ ಬ್ರಾಂದಿ ಕುಡ್ಸ್ ನೋಡ್ಲಿ..." ಎಂದು ಒಂದಿಪ್ಪತ್ತು ಮಾತ್ರೆಗಳನ್ನು ಕಟ್ಟಿಕೊಟ್ಟು ಅರವತ್ತು ರೂಪಾಯಿ ಇಸಿದುಕೊಂಡಿದ್ದರು.

ಶಾಪಿನಿಂದ ಹೊರಗಡೆ ಬಂದ ಬುಡೇನ್ ಸಾಬಿಯೂ, ಅತಾವುಲ್ಲಾನೂ ಒಬ್ಬರನ್ನೊಬ್ಬರು ನೋಡಿಕೊಂಡು ವಿಷಾದಭರಿತರಾಗಿ ನಕ್ಕಿದ್ದರು. ಬುಡೇನ್ ಸಾಬಿ ರೇಷನ್ ಕಾರ್ಡ್, ಎಲೆಕ್ಷನ್ ಗುರುತು ಚೀಟಿ, ಇತ್ತೀಚೆಗೆ ಬಂದ ಆಧಾರ್ ಕಾರ್ಡ್ ಯಾವುಗಳನ್ನೂ ಮಾಡಿಸಿರಲಿಲ್ಲ! "ನಾನೊಬ್ಬಂಟಿ. ಇವೊತ್ತೊಂದೂರು, ನಾಳೆ ಒಂದೂರು ಅನ್ನೋನು. ರೇಷನ್ ಕಾರ್ಡು ನಂಗ್ಯಾಕೆ. ಕೀಲುಗೊಂಬೆ ಆಡಿಸ್ಕೊಂಡೇ ಐದಾರು ಜನಾನ ಸಾಕಬಲ್ಲೆ..." ಎಂದು ಅದರ ಕಡೆ ಗಮನ ಕೊಡದೆ ಉಡಾಫೆ ಮಾಡಿಬಿಟ್ಟಿದ್ದ. ಜೊತೆಗೆ ಯಾವೊತ್ತೂ ಎಲೆಕ್ಷನ್ ಟೈಮಿನಲ್ಲಿ ಊರಲ್ಲಿದ್ದು ಓಟು ಹಾಕಿದವನೂ ಅಲ್ಲ.

ಮಾರನೆಯ ದಿನ ಬೆಳಿಗ್ಗೆಯೇ ಬುಡೇನ್ ಸಾಬನನ್ನು ಕರೆದುಕೊಂಡು ಅತಾವುಲ್ಲಾನು ವಿಲೇಜ್ ಅಕೌಂಟೆಂಟ್ ಸುಬ್ಬಣ್ಣನ ಮನೆಯ ಮುಂದೆ ನಿಂತಿದ್ದ. ಅತಾವುಲ್ಲಾನ ಮಾತುಗಳನ್ನು ಕೇಳಿಸಿಕೊಂಡ ಮಹಾನ್ ದೇಶಭಕ್ತ ಸುಬ್ಬಣ್ಣನು ತಿಕಮಕ ಉರಿಸಿಕೊಂಡು, "ಯಾಕ್ರಿ ಹುಟ್ತೀರ ನಿಮ್ಮಂತೋರು ಈ ದೇಶದಾಗೆ. ಇಷ್ಟುಕ್ಕೂ ನೀನು ಈ ದೇಶದ ಪ್ರಜೆ ಅನ್ನೊ ಗ್ಯಾರಂಟಿನಾದ್ರೂ ಏನೈತೆ. ಅಲ್ಲಯ್ಯ, ನೀನು ಇಂಥೋರ ಮಗ ಅನ್ನೋ ದಾಖ್ಲೆ ಏನಾದ್ರೂ ಇದ್ರೆ ಮಾತ್ರ ತಾಲ್ಲೂಕು ಆಫೀಸಿನಾಗೆ ರೇಷನ್ ಕಾರ್ಡು, ಬಿಪಿಎಲ್ ಕಾರ್ಡು, ಆಧಾರ್ ಕಾರ್ಡು ಎಲ್ಲಾ ಕೊಡೋದು. ಹೋದ್ರೆ ಹೋಗ್ಲಿ, ನೀನು ಈಗಿರೋ ಕೊಂಪೆನಾದ್ರೂ ಯಾರೆಸ್ರಲ್ಲೈತೆ ಅನ್ನೋದಿದ್ರೆ ತಲಾಶು ಮಾಡ್ಕೊಂಡು ಬಾ. ಇಲ್ಲಾ ಆಸ್ಪತ್ರೆಯಲ್ಲೋ, ಇಸ್ಕೂಲಿನಲ್ಲೋ ಕೊಡೊ ನಿನ್ ಡೇಟ್ ಆಫ್ ಬರ್ತ್ ಸರ್ಟಿಫಿಕೇಟಿದ್ರೆ ನೋಡಪ್ಪ ಒಂದ್ ಗತಿ ಕಾಣಿಸಿ ಕಂಗಾಣಿಸಬಹುದು..." ಎಂದು ಬುಡೇನ್ ಸಾಬಿಯನ್ನು ತಗುಲಿಕೊಂಡಿದ್ದ. "ಸಾ ನಾನು ಈ ದೇಶುಕ್ಕೆ ಸ್ವತಂತ್ರ ಬಂದ ದಿನಾನೇ ಹುಟ್ಟಿದ್ದು ಅಂತ ನಮ್ಮ ಬೂಬಮ್ಮ ಹೇಳ್ತಿದ್ಲು ಸಾ. ಬೇಕಾದ್ರೆ ಅದುನ್ನೆ ಬರಕ್ಕಳ್ರಿ ಸಾ..." ಎಂದು ಅಲವತ್ತುಕೊಂಡಿದ್ದ.

"ಅದುಕ್ಕೂ ಏನಾದ್ರೂ ದಾಖ್ಲೆ ಇರ್ಬೇಕಲ್ಲಪ್ಪ. ದಾಖ್ಲೆ ಇಲ್ದೆ ಬರ್ದು ನಾನ್ ಕೆಲ್ಸ ಕಳ್ಕಳ್ಳೇನು. ಎಂಥ ಯಾಪುಲಿ ಮಾತೇಳ್ತೀಯ ನೋಡು..." ಎಂದು ಕೆಕ್ಕರಿಸಿಕೊಂಡು ನೋಡಿದ್ದ ಸುಬ್ಬಣ್ಣ. ತನ್ನ ಕೀಲುಗೊಂಬೆಯ ಆಟ ನೋಡಿ ನೂರಾರು ಊರುಗಳಲ್ಲಿ ಕೇಕೆ ಹಾಕಿಕೊಂಡು ಕುಣಿಯುತ್ತಿದ್ದ, ಹೊಗಳುತ್ತಿದ್ದ ಜನರನ್ನು ನೆನೆದು ಬುಡೇನ್ ಸಾಬಿಯು ಕ್ಷಣ ಭಾವುಕನಾಗಿ ಬೆವೆತುಬಿಟ್ಟನು. ಅವನು ಈಗಿರುವ ಮನೆ ಕೂಡ ಹೊಳವನಹಳ್ಳಿಯ ಶಾನುಭೋಗ ಶಾಮಣ್ಣನ ತಾತನ ಹೆಸರಿನಲ್ಲಿ ಇರುವುದು ವಿಲೇಜ್ ಅಕೌಂಟ್ ಸುಬ್ಬಣ್ಣನಿಗೆ ತಿಳಿಯದ ವಿಷಯವೇನೂ ಆಗಿರಲಿಲ್ಲ.

ಮನೆಗೆ ಹಿಂತಿರುಗಿದ ಬುಡೇನ್ ಸಾಬಿಯು ಏನೋ ಜ್ಞಾಪಿಸಿಕೊಂಡವನಂತೆ ಅಡುಗೆ ಮನೆಯ ಮೂಲೆಯಲ್ಲಿಟ್ಟಿದ್ದ ಹಳೆ ಪೆಟ್ಟಿಗೆಯ ತಳ ಪೂರ್ತಿ ಶೋಧ ನಡೆಸಿದ್ದ. ಬಟ್ಟೆಗಳ ಜೊತೆಗೆ ತಾನು ಚಿಕ್ಕಂದಿನಲ್ಲಿ ಹಾಕುತ್ತಿದ್ದ ಅಂಗಿ ಪೈಜಾಮ, ಮಸೀದಿಯಲ್ಲಿ ಕಟ್ಟಿಸುತ್ತಿದ್ದ ತಾಯ್ತ ಕರಿದಾರಗಳನ್ನು ಬಿಟ್ಟರೆ ಕಾಗದ ಪತ್ರಗಳಂಥವೇನೂ ಕಣ್ಣಿಗೆ ಬೀಳಲಿಲ್ಲ. ಪುಟ್ಟಾರಾಧ್ಯರ ಹೋಟೆಲಿನಲ್ಲಿ ಒಂದೆರಡು ಇಡ್ಲಿ ತಿಂದವನು ಮತ್ತೇನೋ ನೆನಪಾಗಿ ಪ್ರೈಮರಿ ಸ್ಕೂಲಿನ ಕಡೆಗೆ ಗೆಲುವಿನಿಂದ ಹೆಜ್ಜೆ ಹಾಕಿದ. ಅರೇ, ತಾನು ಹುಡುಗನಾಗಿದ್ದಾಗ ಎರಡು ಕೊಠಡಿಗಳ ಹೆಂಚಿನ ಮನೆಯಾಗಿದ್ದ ಸ್ಕೂಲು ಇವೊತ್ತು